ನಂದಾದೀಪ

# ಕವಿಜೀವದ ಗಂಧವ್ರತ

## ಎಚ್‌.ಎಸ್‌. ವೆಂಕಟೇಶಮೂರ್ತಿ (ಜೂನ್ 23, 1944- ಮೇ 30, 2025):

## ಒಂದು ಆಪ್ತ ನೆನಪು



**ಜ.ನಾ. ತೇಜಶ್ರೀ**

ಎಚ್.ಎಸ್. ವೆಂಕಟೇಶಮೂರ್ತಿ ಅವರು ಮೊದಲ ಕವನ (‘ಪರಿವೃತ್ತ’, 1968) ಬರೆಯುವ ಕಾಲಕ್ಕೆ ನಾನಿನ್ನೂ ಹುಟ್ಟಿರಲಿಲ್ಲ. ಈಗ ಇಲ್ಲಿ ಕುಳಿತು ಅವರ ಕವಿತೆ/ಬರಹಗಳನ್ನು ಇಡಿಯಾಗಿ ನೋಡುವಾಗ ಬರವಣಿಗೆಯ ನಂಟು ಹುಟ್ಟಿಸುವ ವಿಚಿತ್ರ ಭಾವಕ್ಕೆ ಮನಸ್ಸು ತಿಳಿಗೊಳ್ಳುತ್ತಿದೆ ಮತ್ತು ಅವರದ್ದೇ ಕವಿತೆಯ ಸಾಲುಗಳನ್ನು ನೆನಪಿಸುತ್ತಿದೆ:

**ನೀವು ಇಷ್ಟಪಡಿ ಬಿಡಿ; ಕವಿತೆಗೆ ಕೊಡಬಹುದಾದ ಕನಿಷ್ಠ ಬೆಲೆ**
**ಏಕಾಗ್ರ ಗಮನ. ಗಿಟ್ಟಲಿಲ್ಲ, ಪುಸ್ತಕ ಮುಚ್ಚಿಟ್ಟು**
**ಹೋಗಬಹುದು ಹೊರಕ್ಕೆ...**
**ಹಾಯೆನಿಸಿ ಕವಿತೆ ಅರೆಗಣ್ಣಲ್ಲಿ ಕಾಯುವುದು ಮತ್ತೊಂದು ಉಸಿರ.**
**ಕವಿತೆಯೆಂದರೆ ಏನು? ರಸಿಕೆಯಾಡುವ ಗಾಯ.**
**ಸವರಿದರೆ ನಿಮ್ಮ ಕಣ್ಬೆಳಕಿನ ಮುಲಾಮು, ಕವಿತೆ ಉಸುರುವುದು:**
**ನೋಯುವುದೆ ನೋವುಗಳ**

ಇದು, 2013ರಲ್ಲಿ ಪ್ರಕಟಗೊಂಡ ಅವರ ಶಂಖದೊಳಗಿನ ಮೌನ ಸಂಕಲನದ ‘ಕವಿತೆಯ ಗಾಯ’ ಎನ್ನುವ ಕವನ. ಮೊದಲ ಕವಿತೆ ಬರೆದ ಇಪ್ಪತ್ತನಾಲ್ಕರ ಪ್ರಾಯದ ಎಚ್‌ಎಸ್‌ವಿ ಮತ್ತು ಸುಮಾರು 70 ವರ್ಷ ತಲುಪಿದ್ದಾಗಿನ ‘ಶಂಖದೊಳಗಿನ ಮೌನ’ ಕೃತಿಗಳು ಅವರ ಮೂಲನೆಲೆ ಮತ್ತು ವಿಕಸನ ಎರಡನ್ನೂ ತೋರಿಸುತ್ತವೆ. ಅವರ ಅನುಭವಲೋಕದ ಆಳ ಮತ್ತು ವಿಸ್ತಾರದ ದಾರಿಯನ್ನು ನಾವು ಅರಿಯಬಲ್ಲ ಕೈಮರಗಳು ಅವರ ಕೃತಿಗಳು.

ಕಾದಂಬರಿ, ಮಹಾಕಾವ್ಯ, ಕಥನಕವನ, ನಾಟಕ, ಮಕ್ಕಳ ಸಾಹಿತ್ಯ, ವಿಮರ್ಶೆ, ಸಿನಿಮಾ ಸಂಭಾಷಣೆ, ನಿರ್ದೇಶನ, ಸಣ್ಣಕಥೆ, ಅನುವಾದಗಳ ಮೂಲಕ ನಿರಂತರವಾಗಿ ಭಾಷೆಯ ಜೊತೆ ಒಡನಾಡಿದ ಎಚ್‌ಎಸ್‌ವಿ ಅವರ ಮನಸ್ಸು ಆತುಕೊಂಡಿದ್ದು ಕಾವ್ಯವನ್ನು. ಇತರೆ ಪ್ರಕಾರಗಳಲ್ಲಿಯೂ